ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com

ಇ-ಅಂಚೆ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): U40109KA1999SGC025521

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009

**ವಿಷಯ:** ಕವಿಪ್ರನಿನಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲಾ/ಕಾಲೇಜುಗಳ ಮೇಲೆ ಹಾದುಹೋಗಿರುವ ಇ.ಹೆಚ್.ವಿ ಪ್ರಸರಣ ಮಾರ್ಗಗಳನ್ನು ಸ್ಥಳಾಂತರಿಸಲು/ ಎತ್ತರಿಸಲು/ಬಲಪಡಿಸಲು ಗುರುತಿಸಲಾಗಿರುವ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿಯನ್ನು ರಚಿಸುವ ಕುರಿತಂತೆ.

**ಉಲ್ಲೇಖ:**
1. ಅಖಿಲ ಭಾರತ ವಕೀಲರ ಸಂಘ, ಕರ್ನಾಟಕ ಘಟಕ ರವರು ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 38953/2019 ರಲ್ಲಿ ಮಾನ್ಯ ಉಚ್ಚ ನ್ಯಾಯಲಯದ ತೀರ್ಪು ದಿನಾಂಕ: 06.09.2021.
2. ದಿನಾಂಕ 04.11.2021 ರಂದು ಎಲ್ಲಾ ಮುಖ್ಯ ಇಂಜಿನಿಯರ್ (ವಿ) ರವರುಗಳೊಡನೆ ನಡೆದ ವೀಡಿಯೋ ಸಂವಾದ ಸಭಾ ನಡಾವಳಿಗಳು.
3. ದಿನಾಂಕ 18.11.2021 ರಂದು ನಡೆದ 126ನೇ ಮಂಡಳಿ ನಿರ್ದೇಶಕರುಗಳ ಸಭೆಯ ನಡಾವಳಿಗಳು.

*******

**ಮುನ್ನುಡಿ:**

ಅಖಿಲ ಭಾರತ ವಕೀಲರ ಸಂಘ, ಕರ್ನಾಟಕ ಘಟಕ ರವರು ರಾಜ್ಯಾದಾದ್ಯಂತ ಶಾಲೆ/ಕಾಲೇಜುಗಳ ಮೇಲೆ ಹಾದುಹೋಗಿರುವ ಪ್ರಸರಣ ಮಾರ್ಗಗಳನ್ನು ಸ್ಥಳಾಂತರಿಸುವ ಸಂಬಂಧ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 38953/2019 ಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಲಯವು ದಿನಾಂಕ 06.09.2021 ರಂದು ಮಧ್ಯಂತರ ಆದೇಶವನ್ನು ಹೊರಡಿಸಿದೆ. ಸದರಿ ಆದೇಶದನ್ವಯ ಶಾಲಾ/ಕಾಲೇಜುಗಳ ಮೇಲೆ ಹಾದುಹೋಗಿರುವ 11ಕೆ.ವಿ ಮಾರ್ಗಗಳನ್ನು ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳುವಂತೆ ಕವಿಪ್ರನಿನಿ ಗೆ ಸೂಚನೆಯನ್ನು ನೀಡಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯುವು ದಿನಾಂಕ 06.09.2021 ರಂದು ಹೊರಡಿಸಿರುವ ಮಧ್ಯಂತರ ಆದೇಶವು ರಾಜ್ಯದ ಸಂಬಂಧಪಟ್ಟ ವಿತರಣಾ ಕಂಪನಿಗಳ ಮಾಲೀಕತ್ವ, ಕಾರ್ಯಾಚರಣೆ ಮತ್ತು ನಿರ್ವಹಿಸುತ್ತಿರುವ 11ಕೆ.ವಿ ಮಾರ್ಗಗಳಿಗೆ ಸಂಬಂಧಿಸಿದ್ದು, ಮಾನ್ಯ ನ್ಯಾಯಾಲಯವು ಹೊರಡಿಸಿರುವ ನಿರ್ದೇಶನವನ್ನು ರಾಜ್ಯದಲ್ಲಿನ ವಿತರಣಾ ಪರವಾನಗಿದಾರರು ಅನುಸರಿಸಬೇಕಾಗಿರುತ್ತದೆ.

ಆದಾಗ್ಯೂ, ಕವಿಪ್ರನಿನಿಯು ಕರ್ನಾಟಕ ರಾಜ್ಯದಲ್ಲಿನ ಪ್ರಸರಣ ಪರವಾನಗಿದಾರರಾಗಿದ್ದು ಇ.ಹೆಚ್.ವಿ ಪ್ರಸರಣ ಮಾರ್ಗಗಳ (66ಕೆವಿ ವೋಲ್ಟೇಜ್ ಮತ್ತು ಅದಕ್ಕಿಂತ ಹೆಚ್ಚಿನ) ನಿರ್ಮಾಣ, ಕಾರ್ಯಾಚರಣೆ ಮತ್ತು

ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದು, ಎಲ್ಲಾ ಪ್ರಸರಣ ಮಾರ್ಗಗಳನ್ನು ಸಿಇಎ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು–2010ರ ಅನುಸಾರ ಅತ್ಯಂತ ಸುರಕ್ಷಿತವಾಗಿ ಹಾಗೂ ಅವಶ್ಯಕ ಅಂತರಗಳೊಂದಿಗೆ ನಿರ್ಮಿಸಲಾಗಿದೆ..

ಈ ನಿಟ್ಟಿನಲ್ಲಿ, ರಾಜ್ಯದಾದ್ಯಂತ ಶಾಲೆ/ಕಾಲೇಜುಗಳ ಮೂಲಕ ಹಾದುಹೋಗುವ ಪ್ರಸರಣ ಮಾರ್ಗಗಳ ಕುರಿತು ವಲಯವಾರು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಶಾಲೆ/ಕಾಲೇಜುಗಳ ಮೂಲಕ ಹಾದುಹೋಗುವ ಪ್ರಸರಣ ಮಾರ್ಗಗಳ ವಿವರಗಳನ್ನು ಚರ್ಚಿಸಲು ಮತ್ತು ಪರಿಶೀಲಿಸಲು 04.11.2021 ರಂದು ವೀಡಿಯೊ ಸಂವಾದದ ಮೂಲಕ ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ ರವರುಗಳೊಂದಿಗೆ ಸಭೆಯನ್ನು ಕರೆಯಲಾಯಿತು ಮತ್ತು ಶಾಲೆ/ಕಾಲೇಜುಗಳ ಮೇಲೆ ಹಾದುಹೋಗುವ ಎಲ್ಲಾ ಪ್ರಸರಣ ಮಾರ್ಗಗಳಿಗೆ ಸಂಬಂಧಿಸಿದಂತೆ ಸಾಧ್ಯವಿದ್ದಲ್ಲಿ ಸ್ಥಳಾಂತರಿಸಲು / ಎತ್ತರಿಸಲು / ಬಲಪಡಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಿ ನಿರ್ವಹಿಸಲು ಸೂಚನೆಗಳನ್ನು ನೀಡಲಾಯಿತು.

ಸರ್ಕಾರಿ ಶಾಲೆಗಳು/ಕಾಲೇಜುಗಳ ಮೂಲಕ ಹಾದುಹೋಗುವ ಪ್ರಸರಣ ಮಾರ್ಗಗಳ ಸ್ಥಳಾಂತರ/ಎತ್ತರಿಸುವ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸುವ ಸಲುವಾಗಿ, "ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯರವರುಗಳಿಗೆ ರೂ. 5 ಕೋಟಿ ವರೆಗಿನ ಕಾಮಗಾರಿಗಳನ್ನು ಅತೀ ತುರ್ತಾಗಿ ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮಂಡಳಿ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೊಳಪಟ್ಟು ಸಂಪೂರ್ಣ ಅಧಿಕಾರವನ್ನು ನಿಯೋಜಿಸಲಾಗುವುದು" ಎಂದು ದಿನಾಂಕ: 04.11.2021 ರ ಸಭೆಯಲ್ಲಿ ನಿರ್ಧರಿಸಲಾಗಿರುತ್ತದೆ. ಈ ವಿಷಯವಾಗಿ ತೆಗೆದುಕೊಂಡ ಕ್ರಮದ ಅನುಮೋದನೆ ಹಾಗೂ ಅನುಸಮರ್ಥನೆಯನ್ನು ಕೋರಿ ದಿನಾಂಕ 18.11.2021ರಂದು ನಡೆದ ಮಂಡಳಿ ನಿರ್ದೇಶಕರುಗಳ ಸಭೆಯ ಮುಂದೆ ಮಂಡಿಸಲಾಗಿರುತ್ತದೆ.

ದಿನಾಂಕ 18.11.2021ರಂದು ನಡೆದ 126ನೇ ಆಡಳಿತ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ, ವಿವರವಾದ ಚರ್ಚೆಯ ನಂತರ, ಅಂತಹ ಸ್ಥಳಾಂತರಿಸುವ ಕಾಮಗಾರಿಗಳಿಗೆ ಪ್ರಕರಣದ ಆಧಾರದ ಮೇಲೆ ಇನ್–ಪ್ರಿನ್ಸಿಪಲ್ ಅನುಮೋದನೆಯನ್ನು ನೀಡಲು ಸಮಿತಿಯನ್ನು ರಚಿಸಬೇಕೆಂದು ಮತ್ತು ಸಂಬಂಧಪಟ್ಟ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ ರವರುಗಳು ಯೋಜನೆಯ ಅಂದಾಜು ವೆಚ್ಚ ಮತ್ತು ಅಗತ್ಯತೆಯೊಂದಿಗೆ ವಿವರವಾದ ಕ್ರಿಯಾ ಯೋಜನೆಯನ್ನು ಸಲ್ಲಿಸಬೇಕೆಂದು ನಿರ್ಧರಿಸಲಾಗಿರುತ್ತದೆ.

ದಿನಾಂಕ 18.11.2021ರಂದು ನಡೆದ 126ನೇ ಆಡಳಿತ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿನ ಮಂಡಿಸಲಾದ ವಿಷಯ ಸಂಖ್ಯೆ: 126/27 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಲಾಯಿತು.

"ಕವಿಪ್ರನಿನಿಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಮತ್ತು ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ರವರನ್ನು ಸದಸ್ಯರಾಗಿ ಒಳಗೊಂಡಂತೆ (ಸಮಿತಿಗೆ ಸದಸ್ಯರಾಗಿ ಇತರ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡುವುದನ್ನು ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ನಿರ್ಧರಿಸುವುದು) ಸರ್ಕಾರಿ ಶಾಲೆಗಳು/ಕಾಲೇಜುಗಳ ಮೇಲೆ ಹಾದುಹೋಗುವ ಪ್ರಸರಣ ಮಾರ್ಗಗಳನ್ನು ಸ್ಥಳಾಂತರಿಸಲು / ಎತ್ತರಿಸಲು / ಬಲಪಡಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಕರಣದ ಆಧಾರದ ಮೇಲೆ ಇನ್–

ಪ್ರಿನ್ಸಿಪಲ್ ಅನುಮೋದನೆ ನೀಡಲು ಸಮಿತಿಯನ್ನು ರಚಿಸಲು ಈ ಮೂಲಕ ಒಪ್ಪಿಗೆ ನೀಡಲಾಗಿದೆ ಎಂದು ನಿರ್ಧರಿಸಲಾಗಿದೆ".

"ಕವಿಪ್ರನಿನಿ ಯ ವ್ಯವಸ್ಥಾಪಕ ನಿರ್ದೇಶಕರು ಈ ನಿಟ್ಟಿನಲ್ಲಿ ಮುಂದಿನ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಈ ಮೂಲಕ ಅಧಿಕಾರ ಹೊಂದಿದ್ದಾರೆ ಎಂದು ನಿರ್ಧರಿಸಲಾಗಿದೆ".

"ಹಾಗೂ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಕವಿಪ್ರನಿನಿ ರವರು ಈ ವಿಷಯಕ್ಕೆ ಅನುಗುಣವಾಗಿ ಅಗತ್ಯ ಆದೇಶವನ್ನು ಹೊರಡಿಸಲು ಅಧಿಕಾರ ನೀಡಲಾಗಿದೆಯೆಂದು ನಿರ್ಧರಿಸಲಾಗಿದೆ".

**ಆದ್ದರಿಂದ ಈ ಆದೇಶ:**

**ಆದೇಶ ಸಂಖ್ಯೆ ಕವಿಪ್ರನಿನಿ/ಬಿ19/345/85-86** **ದಿನಾಂಕ:** 24.12.2021

ಮೇಲಿನ ಪೀಠಿಕೆಗೆ ಅನುಸಾರವಾಗಿ, ದಿನಾಂಕ 18.11.2021 ರಂದು ನಡೆದ 126ನೇ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಮಂಡಿಸಲಾದ ವಿಷಯ ಸಂಖ್ಯೆ 126/27ಕ್ಕೆ ಸಂಬಂದಿಸಿದಂತೆ ತೆಗೆದುಕೊಳ್ಳಲಾದ ನಿರ್ಣಯದ ಪ್ರಕಾರ ಸರ್ಕಾರಿ ಶಾಲೆಗಳು/ಕಾಲೇಜುಗಳ ಮೇಲೆ ಹಾದುಹೋಗುವ ಪ್ರಸರಣ ಮಾರ್ಗಗಳನ್ನು ಸ್ಥಳಾಂತರಿಸಲು/ಎತ್ತರಿಸಲು/ಬಲಪಡಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಕರಣದ ಆಧಾರದ ಮೇಲ ಇನ್-ಪ್ರಿನ್ಸಿಪಲ್ ಅನುಮೋದನಯನ್ನು ನೀಡಲು ಕಳಗಿನ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ.

| | | | |
|---|---|---|---|
| 1. | ವ್ಯವಸ್ಥಾಪಕ ನಿರ್ದೇಶಕರು | : | ಅಧ್ಯಕ್ಷರು |
| 2. | ನಿರ್ದೇಶಕರು (ಪ್ರಸರಣ) | : | ಸದಸ್ಯರು |
| 3. | ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), | : | ಸದಸ್ಯರು |
| 4. | ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) | : | ಸದಸ್ಯರು |
| 5. | ಮುಖ್ಯ ಇಂಜಿನಿಯರ್ (ವಿ), (ಟಿ.ಎ & ಕ್ಯೂ.ಸಿ) | : | ಸದಸ್ಯರು |
| 6. | ಆರ್ಥಿಕ ಸಲಹೆಗಾರರು (ಆಂ.ಪ) | : | ಸದಸ್ಯರು |
| 7. | ಸಂಬಂಧಿಸಿದ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ. | : | ಸದಸ್ಯರು |
| 8. | ಅಧೀಕ್ಷಕ ಇಂಜಿನಿಯರ್ (ವಿ) (ತಾಂತ್ರಿಕ) | | ಸದಸ್ಯರು |
| 9. | ಅಧೀಕ್ಷಕ ಇಂಜಿನಿಯರ್ (ವಿ) (ಯೋಜನೆ) | : | ಸದಸ್ಯರು-ಸಂಚಾಲಕರು |

ಸಂಬಂಧಪಟ್ಟ ಪ್ರಸರಣ ವಲಯದ ಮುಖ್ಯ ಇಂಜಿನಿಯರ್ (ವಿ) ರವರು, ಸರ್ಕಾರಿ ಶಾಲೆಗಳು/ಕಾಲೇಜುಗಳ ಮೇಲೆ ಹಾದುಹೋಗುವ ಪ್ರಸರಣ ಮಾರ್ಗಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಅಂತರಗಳು ಇಲ್ಲದೇಯಿದ್ದಲ್ಲಿ ಅಂತಹ ಸಂದರ್ಭಗಳಲ್ಲಿ ಮಾರ್ಗಗಳನ್ನು ಸ್ಥಳಾಂತರಿಸಲು/ಎತ್ತರಿಸಲು/ಬಲಪಡಿಸಲು ಸಂಬಂಧಪಟ್ಟ ವಿದ್ಯುತ್ ಪರಿವೀಕ್ಷಣಾ ಅಧಿಕಾರಿಗಳಿಂದ ಸುರಕ್ಷತಾ ಕ್ಲಿಯರೆನ್ಸ್ ವರದಿಯನ್ನು ಪಡೆದು 30 ದಿನಗಳೊಳಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ಪ್ರಸರಣ ವಲಯದ ಮುಖ್ಯ ಇಂಜಿನಿಯರ್ (ವಿ) ರವರು ಯೋಜನೆಯ ಅಂದಾಜು ವೆಚ್ಚ ಮತ್ತು ಅಗತ್ಯತೆಯೊಂದಿಗೆ ವಿವರವಾದ ಕ್ರಿಯಾ ಯೋಜನೆಯನ್ನು ಮುಖ್ಯ ಇಂಜಿನಿಯರ್ (ವಿ), ಯೋಜನೆ ಮತ್ತು ಸಮನ್ವಯ ರವರಿಗೆ ಸಲ್ಲಿಸತಕ್ಕದ್ದು. ಮುಖ್ಯ ಇಂಜಿನಿಯರ್(ವಿ), ಯೋಜನೆ ಮತ್ತು

ಸಮನ್ವಯ ರವರು ಅಂತಹ ಸ್ಥಳಾಂತರ ಕಾಮಗಾರಿಗಳ ತಾಂತ್ರಿಕ ಕಾರ್ಯಸಾಧ್ಯತೆಯನ್ನು ಪರಿಶೀಲಿಸಿ ಶಿಫಾರಸಿನೊಂದಿಗೆ ಅನುಮೋದನೆಗಾಗಿ ಸಮಿತಿಯ ಮುಂದೆ ಪ್ರಸ್ತಾವನೆಗಳನ್ನು 15 ದಿನಗೊಳಗಾಗಿ ಮಂಡಿಸತಕ್ಕದ್ದು.

ಸಮಿತಿಯು ಸರ್ಕಾರಿ ಶಾಲೆಗಳು/ಕಾಲೇಜುಗಳ ಮೇಲೆ ಹಾದುಹೋಗುವ ಪ್ರಸರಣ ಮಾರ್ಗಗಳ ಸ್ಥಳಾಂತರಿಸುವ/ಎತ್ತರಿಸುವ/ಬಲಪಡಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆಗಳನ್ನು ಪರಿಶೀಲಿಸಿ, ಪ್ರಕರಣದ ಆಧಾರದ ಮೇಲೆ ಅಂತಹ ಕಾಮಗಾರಿಗಳಿಗೆ ಇನ್-ಪ್ರಿನ್ಸಿಪಲ್ ಅನುಮೋದನೆಯನ್ನು ನೀಡುತ್ತದೆ.

ಸಮಿತಿಯು ಅಂತಹ ಸ್ಥಳಾಂತರದ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು ನಿಗಮದ ಮಾನದಂಡಗಳ ಪ್ರಕಾರ ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಅಂತಹ ಅನುಮೋದಿತ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸೂಕ್ತವಾದ ಬಜೆಟ್ ಅನುದಾನದಡಿಯಲ್ಲಿ ನಿರ್ವಹಿಸಲು ಹಾಗೂ ಇದಕ್ಕೆ ಅಗತ್ಯವಾದ ಹಣಕಾಸಿನ ಅಧಿಕಾರವನ್ನು ಸಂಬಂಧಿಸಿದ ವಲಯ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ ರವರಿಗೆ ನಿಯೋಜಿಸುತ್ತದೆ.

ಅನುಮೋದಿತ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ, ಮುಖ್ಯ ಇಂಜಿನಿಯರ್ (ವಿ) (ಟಿಎ ಮತ್ತು ಕ್ಯೂಸಿ) ರವರು, ಅಂತಹ ಕಾಮಗಾರಿಗಳ ಸುರಕ್ಷತಾ ಅಂಶಗಳನ್ನು ಪರಿಶೀಲಸಿ ಅಗತ್ಯ ಅನುಸರಣಾ ವರದಿಯನ್ನು ಕಾಮಗಾರಿ ಪೂರ್ಣಗೊಂಡ 30 ದಿನಗೊಳಗಾಗಿ ಸಮಿತಿಗೆ ಸಲ್ಲಿಸಲು ವ್ಯವಸ್ಥೆ ಮಾಡತಕ್ಕದ್ದು.

B.R 24/12/21

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ**

**ಗೆ,**

1) ಸಮಿತಿಯ ಎಲ್ಲಾ ಸದಸ್ಯರುಗಳಿಗೆ
2) ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
3) ಎಲ್ಲಾ ಅಧೀಕ್ಷಕ ಇಂಜಿನಿಯರು(ವಿ) ಕಾಮಗಾರಿ/ನಿರ್ವಹಣೆ/ ಕಾ ಮತ್ತು ನಿ, ಕವಿಪ್ರನಿನಿ.
4) ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು(ವಿ) ಕಾಮಗಾರಿ/ ಟಿಎಲ್&ಎಸ್ಎಸ್ ವಿಭಾಗಗಳು, ಕವಿಪ್ರನಿನಿ.
5) ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಪ್ರಸರಣ), ನಿರ್ದೇಶಕರು (ಹಣಕಾಸು) ಕವಿಪ್ರನಿನಿ ರವರುಗಳು, ಆಪ್ತಕಾರ್ಯದರ್ಶಿಗಳ ಮಾಹಿತಿಗಾಗಿ.

**ಪ್ರತಿಯನ್ನು,**

ಅಧೀಕ್ಷಕ ಇಂಜಿನಿಯರ್ (ವಿ), ಐ.ಟಿ, ಕವಿಪ್ರನಿನಿ ರವರಿಗೆ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡಲು.